ಅಪರ  ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ,
ಕುಣಿಗಲ್.

ಸಿ.ಸಿ.ನಂ. 3869-2022

ಸಿ.ಡಬ್ಲ್ಯೂ-03
ಪಿ.ಡಬ್ಲ್ಯೂ-02

ಸಾಕ್ಷಿದಾರನ ಹೆಸರು :- ಕೆ ಎಲ್ ಸೋಮಶೇಖರ್
ತಂದೆಯ ಹೆಸರು :- ಲಿಂಗೇಗೌಡ
ವಯಸ್ಸು :- 74 ವರ್ಷ
ಉದ್ಯೋಗ :- ವ್ಯವಸಾಯ
ವಾಸ :- ನಿಡಸಾಲೆ

ಸಾಕ್ಷಿಗೆ ದಿಃ **18.12.2024** ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.

ಚಾಸಾ 1 ನನ್ನ ಸೊಸೆ. ಚಾಸಾ 2 ನನ್ನ ಹೆಂಡತಿ, ಚಾಸಾ 4 ನನ್ನ ಮಗ. ಆರೋಪಿತರು ನನಗೆ ಗೊತ್ತು. ದಿಃ 09.04.2020 ರಂದು ಬೆಳಿಗ್ಗೆ 8-9 ಗಂಟೆ ಸಮಯದಲ್ಲಿ ಆರೋಪಿತರು ನಮ್ಮ ಮನೆಯ ಪಕ್ಕದ ಗಲ್ಲಿಯಲ್ಲಿ ಮನೆ ಕಟ್ಟುತ್ತಿದ್ದು, ನಾನು ಅವರಿಗೆ ಖಾತೆ ಎಕ್ಸಟ್ರಾಕ್ಟ ಪ್ರಕಾರ ಮನೆ ಕಟ್ಟಿ ಕೊಳ್ಳುವಂತೆ ಹೇಳಿರುತ್ತೇನೆ. ಆರೋಪಿತರು ನಮ್ಮ ಮೇಲೆ ಗಲಾಟೆ ಮಾಡಿದ್ದು ನಾವು ಪಿಡಿಒ, ಇ.ಒ ಮತ್ತು ಪೋಲಿಸರಿಗೆ ದೂರನ್ನು ನೀಡಿದ್ದು 3 ಜನರು ಬಂದು ಸ್ಥಳ ಪರೀಶಿಲನೆ ಮಾಡಿರುತ್ತಾರೆ.  ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಪಂಚಾಯಿತಿ ಸದಸ್ಯರಿಗೆ ವಿಷಯ ತಿಳಿಸಿ ನಾನು ಕರೆಯಿಸಿ ಆರೋಪಿತರಿಗೆ ಬುದ್ದಿವಾದ ಹೇಳುವಂತೆ ಹೇಳಿರುತ್ತೇನೆ. ಆರೋಪಿ 3 ರವರು ಕಲ್ಲಿನಿಂದ ಬೆನ್ನಿಗೆ ಹೊಡೆದಿರುತ್ತಾರೆ. ಆರೋಪಿ 3 ದೊಣ್ಣೆಯಿಂದಲು ಸಹ ಚಾಸಾ .2 ರವರಿಗೆ ಬೆನ್ನಿಗೆ ಹೊಡೆದಿರುತ್ತಾರೆ.   ಚಾಸಾ 5 ಮತ್ತು 6 ಬಂದು ಜಗಳ ಬಿಡಿಸಿರುತ್ತಾರೆ. ಈ ವಿಚಾರವಾಗಿ ಚಾಸಾ 1 ರವರು ದೂರು ನೀಡಿರುತ್ತಾರೆ. ನಾನು ನನ್ನ ಹೇಳಿಕೆ ನೀಡಿರುತ್ತೇನೆ. ದೊಣ್ಣೆ  ಮತ್ತು ಕಲ್ಲನ್ನು ಗುರುತಿಸುತ್ತೇನೆ.

**(ಈ ಹಂತದಲ್ಲಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು  ಭಾಗಶಃ ಪ್ರತಿಕೂಲ ಸಾಕ್ಷಿಯೆಂದು  ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದು ಅನುಮತಿ ನೀಡಲಾಗಿದೆ. )**

ಪಾಟೀ ಸವಾಲುಃ ಸಹಾಯಕ ಅಭಿಯೋಜಕರಿಂದಃ

ಆರೋಪಿತರು ನಮ್ಮ ಮನೆಯ ಪಕ್ಕದ ಗಲ್ಲಿಯ ವಿಚಾರವಾಗಿ ಆಗಾಗ್ಗೆ  ಜಗಳು ಮಾಡುತ್ತಿದ್ದರು ಎಂದರೆ ಸರಿ. ದಿಃ 09.04.2020 ರಂದು ಬೆಳಿಗ್ಗೆ 9 ಗಂಟೆ ಸಮಯದಲ್ಲಿ

ನಾನು, ಚಾಸಾ 1, 2,  ಮತ್ತು 4 ನಮ್ಮ ಮನೆಯ ಮುಂದೆ ಮಾತನಾಡುತ್ತಾ ಕುಳಿತಿದ್ದೆವು ಎಂದರೆ ಸರಿ. ಆರೋಪಿತರು ನಮ್ಮ ಮನೆಯ ಬಳಿ ನಿಂತುಕೊಂಡು ಗಲ್ಲಿಯ ವಿಚಾರವಾಗಿ ವಿನಾಕಾರಣ ನಮಗೆ ಹಿನಾಯವಾಗಿ ಬೈಯುತ್ತಿದ್ದರು ಎಂದರೆ ಸರಿ. ಆಗ ಚಾಸಾ 2 ಮನೆಯ ಮುಂದಿನ ರಸ್ತೆಗೆ ಹೋಗಿ ಆರೋತರನ್ನು ಏಕೆ ನಮ್ಮ ಬೈಯುತ್ತಿದ್ದೀರಿ ಎಂದು ಕೇಳಿದಾಗ ಆರೋಪಿತರು ಚಾಸಾ 2 ರವರು ಬೆವರಿಸಿ ಮುಂಡೆ, ಸೂಳೆ ಮುಂಡೆ ಎಂದು ಹೀನಾಯವಾಗಿ ಬೈದಿರುತ್ತಾರೆ ಎಂದರೆ ಸರಿ. ಆರೋಪಿ 1 ಮತ್ತು 3 ಏಕಾಏಕಿ ಚಾಸಾ 2 ರವರನ್ನು ಹಿಡಿದುಕೊಂಡು ಎಳೆದಾಡಿ ಕೈಗಳಿಂದ ಮೈ ಕೈಗೆ ಹೊಡೆದು ಕಾಲುಗಳಿಂದ ಒದೆಯುತ್ತಿದ್ದರು ಎಂದರೆ ಸರಿ. ಆಗ ನಾನು ಮತ್ತು ಚಾಸಾ 4 ಜಗಳ ಬಿಡಿಸಲು ಹೋದಾಗ ಆರೋಪಿತರು ನಮಗೆ ಅವಾಚ್ಯ ಶಬ್ದಗಳಿಂದ ಬೋಳಿ ಮಕ್ಕಳ  ಸೂಳೆ ಮಕ್ಕಳ, ಬಡ್ಡಿ ಮಕ್ಕಳು ಎಂದು ಬೈದು ಆರೋಪಿ ದೊಣ್ಣೆಯಿಂದ ಪುನಃ ಚಾಸಾ.4  ರವರಿಗೆ ಮೈ ಕೈಗೆ ಹೊಡೆದು ನೋವುಂಟು ಮಾಡಿದ್ದು, ಆರೋಪಿ 3 ನನ್ನ ಬೆನ್ನಿಗೆ ಮತ್ತು ಮೈ ಕೈಗೆ ಗುದ್ದಿ ನೋವುಂಟು ಮಾಡಿದ್ದಾರೆ ಎಂದರೆ ಸರಿ.  ಚಾಸಾ 1, 5 ಮತ್ತು 6 ಜಗಳ ಬಿಡಿಸಿರುತ್ತಾರೆ ಎಂದರೆ ಸರಿ. ಆರೋಪಿತರು ನಮ್ಮನ್ನು ಕುರಿತು ನಿಮನ್ನು ಇಷ್ಟಕ್ಕೆ ಬಿಡುವುದಿಲ್ಲ ನಿಮ್ಮನ್ನೆಲ್ಲಾ ಕೊಲೆ ಮಾಡಿ ಸಾಯಿಸುತ್ತೇವೆ ಎಂದು ಕೊಲೆ ಬೆದರಿಕೆ ಹಾಕಿ ದೊಣ್ಣೆ  ಮತ್ತು ಕಲ್ಲನ್ನು ಸ್ಥಳದಲ್ಲಿ ಬಿಸಾಕಿ ಹೋಗಿರುತ್ತಾರೆ ಎಂದರೆ ಸರಿ.  ನನಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಂತಹ ಗಾಯಗಳು ಆಗದೇ ಇರುವ ಕಾರಣ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿ.

<u>ಪಾಟೀ ಸವಾಲುಃ  ಆರೋಪಿತರ ಪರ ವಕೀಲರುಃ  ಸಿ ಜಿ ಸಿ  ವಕೀಲರಿಂದಃ</u>

ನಾನು ಪ್ರಥಮ ಪಿ ಯು ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಯಾವುದಾದರೂ ಗಲಾಟೆ ಆದರೆ ತಕ್ಷಣವೇ ದೂರು ನೀಡಬೇಕೆಂಬ ಅರಿವು ನನಗೆ ಇರುತ್ತದೆ .  ಗಲಾಟೆ ಆದ ದಿನ ನಾನು ದೂರು ನೀಡಿರುವುದಿಲ್ಲ. ಸಾಕ್ಷಿ ಗ್ರಾಮ ಪಂಚಾಯಿತಿಯವರು ರಾಜೀ ಮಾಡಿಕೊಳ್ಳುವಂತೆ ಹೇಳಿರುತ್ತಾರೆ ಎಂದು ನುಡಿಯುತ್ತಾರೆ . ಗಲಾಟೆ ಆದ ದಿನವೇ ಪೋಲಿಸರು ಮತ್ತು ಪಿಡಿಒ ರವರು ಸ್ಥಳಕ್ಕೆ ಬಂದಿರುತ್ತಾರೆ. ಅದೇ ದಿನ ದೂರು ಕೊಡುವ ಪ್ರಯತ್ನ ನಾವು ಮಾಡಿದ್ದು, ಪೋಲಿಸರು ಮತ್ತು ಪಿಡಿಒ ರವರು ಅಕ್ಕಪಕ್ಕದ ಮನೆಯವರಾಗಿರುವ  ಕಾರಣ ಜಗಳ ಬಗೆಹರಿಸಿಕೊಳ್ಳುವಂತೆ ಸೂಚಿಸಿರುತ್ತಾರೆ ಎಂದು ಹೇಳಿರುತ್ತಾರೆ. ಸದರಿ ವಿಷಯವನ್ನು ನನ್ನ ಹೇಳಿಕೆಯಲ್ಲಿ ಹೇಳಿರತ್ತೇನೆ. ನಾನು ಆ ರೀತಿ ಯಾವುದೇ ಹೇಳಿಕೆ ನೀಡಿಲ್ಲ ಪೋಲಿಸರು ಮತ್ತು ಪಿಡಿಒ ರವರು ಸ್ಥಳಕ್ಕೆ ಬಂದು ಜಗಳ ಬಗೆಹರಿಸಿಕೊಳ್ಳುವಂತೆ ಹೇಳಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿತರು ಅವರ ವಿಸ್ತೀರ್ಣದ ಜಾಗದಲ್ಲಿ ಮನೆ  ಕಟ್ಟುತ್ತಿದ್ದು ನಾನು ಅವರಿಗೆ

ಯಾವುದೇ ಸಲಹೆ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಪಿಡಿಒ ರವರಿಗೆ ಲಿಖಿತ ರೂಪದಲ್ಲಿ ಅರ್ಜಿ ನೀಡಿರುತ್ತೇನೆ. ಸದರಿ ಅರ್ಜಿಯ ನಕಲನ್ನು ನಾನು ಪೋಲಿಸರಿಗೆ ನೀಡಿರುತ್ತೇನೆ. ಅರ್ಜಿಯನ್ನು ಘಟನೆಗೂ ಮೊದಲೇ ಕೊಟ್ಟಿರುತ್ತೇನೆ. ಪೋಲಿಸರಿಗೂ ಸಹ ಅರ್ಜಿಯನ್ನು ಘಟನೆಗೂ ಮೊದಲೇ ಕೊಟ್ಟಿರುತ್ತೇನೆ. ಆರೋಪಿತರು ಅಕ್ರಮವಾಗಿ ಮನೆ ಕಟ್ಟಿರುವ ಬಗ್ಗೆ ದಾಖಲೆಯನ್ನು ಕೊಟ್ಟಿದ್ದೇನೆ. ಆರೋಪಿತರು ಯಾವುದೇ ಒತ್ತುವರಿ ಮಾಡಿಲ್ಲ ಹಾಗೂ ನಾನು ಯಾವುದೇ ಅರ್ಜಿ ನೀಡಿಲ್ಲ ಎಂದರೆ ಸರಿಯಲ್ಲ. ಗಲ್ಲಿ ಜಾಗ ಆರೋಪಿತರಿಗೆ ಸೇರಿದ್ದು ನನಗೆ ಸೇರಿದ್ದು ಇರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಯಾವುದೇ ರಾಜಕೀಯ ಪಕ್ಷಕ್ಕೆ ಸೇರಿರುವುದಿಲ್ಲ. ನನ್ನ ಮತ್ತು ಪಂಚಾಯಿತಿ ಅಧಿಕಾರಿಗಳ ಒಡನಾಟ ಚೆನ್ನಾಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿ 3 ಮಾತ್ರ ದೊಣ್ಣೆ ಮತ್ತು ಕಲ್ಲಿನಿಂದ ನನಗೆ ಮತ್ತು ಚಾಸಾ.2 ರವರಿಗೆ ಹೊಡೆದಿರುತ್ತಾರೆ. ಆರೋಪಿ 3 ರವರು ನನಗೆ ಕಲ್ಲನ್ನು ಹಿಂದುಗಡೆಯಿಂದ ಹೊಡೆದಿರುತ್ತಾರೆ. ಸದರಿ ಕಲ್ಲು ಹಿಡಿಗಾತ್ರದ ಕಲ್ಲಾಗಿರುತ್ತದೆ. ಸದರಿ ಕಲ್ಲು ಯಾವ ಕಲ್ಲು ಎಂದು ನನಗೆ ಗೊತ್ತಿಲ್ಲ.

ಮುಂದುವರೆದ ಪಾಟೀ ಸವಾಲು ಕೋರಿಕೆ ಮೇರೆಗೆ ಮುಂದೂಡಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.
ಕುಣಿಗಲ್.